

# ಸೋನಾಕ್ಷಿ ತಲೆನೋವು

ಕಳೆದ ವರ್ಷ ದೆಹಲಿಯಲ್ಲಿ ಏರ್ಪಡಿಸಿದ್ದ ಸ್ಟಾರ್ ನೈಟ್ ಮನರಂಜನೆ ಕಾರ್ಯಕ್ರಮದಲ್ಲಿ ಭಾಗವಹಿಸದ್ದಕ್ಕೆ ಸೋನಾಕ್ಷಿ ಸಿನ್ಹಾ ಮೇಲೆ ಮೊರಾದಾಬಾದ್ ಠಾಣೆಯಲ್ಲಿ ಚೀಟಿಂಗ್ ಕೇಸ್ ದಾಖಲಾಗಿದೆ. ಇತ್ತೀಚೆಗೆ ಉತ್ತರ ಪ್ರದೇಶದ ಪೊಲೀಸರು ತನಿಖೆಗೆಂದು ಜುಹುನಲ್ಲಿರುವ ನಟಿಯ ಮನೆಗೆ ಬಂದಿದ್ದರಂತೆ. 'ಮನರಂಜನಾ ನೈಟ್‌ನಲ್ಲಿ ಭಾಗವಹಿಸಲು ಒಪ್ಪಿಕೊಂಡು ಸೋನಾಕ್ಷಿ 24 ಲಕ್ಷ ರೂಪಾಯಿ ಅಡ್ವಾನ್ಸ್ ಹಣ ಪಡೆದಿದ್ದಾಳೆ. ಆದರೆ ಬರದೆ ಕೈಕೊಟ್ಟಿದ್ದಾಳೆ' ಎನ್ನುವುದು ಆಕೆಯ ವಿರುದ್ಧ ಇವೆಂಟ್ ನಡೆಸಿದ್ದ ಪ್ರಮೋದ್ ಶರ್ಮಾ ಎಂಬಾತ ನೀಡಿರುವ ದೂರು.

ಪೊಲೀಸರು ಹೋದಾಗ ಸೋನಾಕ್ಷಿ ಮನೆಯಲ್ಲಿ ಇರಲಿಲ್ಲವಂತೆ. ಮೂರು ಗಂಟೆ ಕಾದ ಪೊಲೀಸರು ಮರಳಿ ಹೋಗಿದ್ದಾರೆ. ಆದರೆ ಈ ಬಗ್ಗೆ ಚಿತ್ರವಿಚಿತ್ರ ಸುದ್ದಿಗಳು ಹಬ್ಬಿರುವುದು ಸೋನಾಕ್ಷಿಯನ್ನು ಸಿಟ್ಟಿಗೆಬ್ಬಿಸಿದೆ. 'ನಾನು ಕೆಲಸದಲ್ಲಿ ಬ್ಯುಸಿ. ಪೊಲೀಸರ ತನಿಖೆಗೆ ಸಹಕರಿಸುತ್ತಿದ್ದೇನೆ. ಸುಮ್ಮನೆ ಇಲ್ಲಸಲ್ಲದ ಸುದ್ದಿ ಹಬ್ಬಿಸಬೇಡಿ' ಎಂದು ಜಾಲತಾಣದಲ್ಲಿ ಸೋನಾಕ್ಷಿ ಸ್ಪಷ್ಟನೆ ನೀಡಿದ್ದಾಳೆ. ಆಕೆ ಕೆಲಸದಲ್ಲಿ ಬ್ಯುಸಿ ಅನ್ನುವುದಂತೂ ನೂರು ಶೇಕಡಾ ನಿಜ. ದಭಾಂಗ್ 3, ಖಾನ್‌ದಾನಿ ಶಫಾಖಾನಾ, ಮಿಶನ್ ಮಂಗಲ್ ಮತ್ತು ಭುಜ್ ಮುಂತಾಗಿ ಹಲವು ಚಿತ್ರಗಳ ಶೂಟಿಂಗ್‌ನಲ್ಲಿ ಆಕೆ ಫುಲ್ ಬ್ಯುಸಿ.

# ಶ್ರದ್ಧಾ ಮದುವೆ?

ಶ್ರದ್ಧಾ ಕಪೂರ್ ಮದುವೆ ನಿಶ್ಚಯವಾಗಿದೆಯೆ? ಕಳೆದ ವಾರವಿಡೀ ಹಾಗೊಂದು ಸುದ್ದಿ ಹರಿದಾಡಿದೆ. ಆಕೆ ತನ್ನ ಗೆಳೆಯ ರೋಹನ್ ಶ್ರೇಷ್ಠನನ್ನು ಮದುವೆ ಆಗಲಿದ್ದಾಳೆ ಎನ್ನುವುದು ಖಚಿತವಾಗಿದೆಯಂತೆ. ಕೆಲವು ಪತ್ರಕರ್ತರು ಈ ವಿಷಯದ ಬಗ್ಗೆ ಆಕೆಯ ತಂದೆ ಶಕ್ತಿ ಕಪೂರ್‌ನನ್ನು ಪ್ರಶ್ನಿಸಿದರಂತೆ. ಬಾಲಿವುಡ್‌ನ ಜನಪ್ರಿಯ ಹಾಸ್ಯನಟ ಶಕ್ತಿ ಕಪೂರ್ ಹಾಸ್ಯಮಯವಾಗಿಯೇ ಉತ್ತರಿಸಿದ್ದಾನೆ. 'ಹೌದಾ! ನನ್ನ ಮಗಳ ಮದುವೆ ಫಿಕ್ಸ್ ಆಗಿದೆಯಾ? ದಯವಿಟ್ಟು ನನ್ನನ್ನು ಮದುವೆಗೆ ಕರೆಯಲು ಮರೆಯಬೇಡಿ' ಎಂದಿದ್ದಾನೆ.

ಮದುವೆಯ ಸುದ್ದಿ ಹರಿದಾಡಿದ್ದು ಕೇಳಿ ಶ್ರದ್ಧಾ ಕೂಡಾ ನಕ್ಕುಬಿಟ್ಟಳಂತೆ. ವರುಣ್ ಧವನ್ ಮತ್ತು ನೋರಾ ಫತೇಹಿ ಜೊತೆಗೆ 'ಸ್ಟ್ರೀಟ್ ಡಾನ್ಸರ್ ಥ್ರೀ ಡಿ' ಸಿನಿಮಾದಲ್ಲಿ ನಟಿಸುತ್ತಿರುವ ಶ್ರದ್ಧಾ, ಮದುವೆ ಬಗ್ಗೆ ಯಾವುದೇ ಸ್ಪಷ್ಟನೆ ನೀಡಿಲ್ಲ. ಆದರೆ ಆಕೆಯ ಪರವಾಗಿ ಅಪ್ಪ ಶಕ್ತಿ ಕಪೂರ್ 'ಮುಂದಿನ ಐದು ವರ್ಷಗಳ ಕಾಲ ಆಕೆ ಮದುವೆಯಾಗುವುದಿಲ್ಲ' ಎಂದಿದ್ದಾನೆ.


